## ನಗೆ ಹೊನಲು



ಒಳ್ಳೆ ಮಾರ್ಕ್ಸ್ ತೆಗೆದು, ಪಾಸಾಗಿದಾನ್ರಿ! ಎಲ್ಲಿ ನಿಮ್ಮ ಹಾಗೆ ಆಗ್ತಾನೋ ಅಂತ ಭಯವಿತ್ತು...



ಜನರು ಈಗ ಹೆಚ್ಚಾಗಿ ಭೂತ, ಪಿಶಾಚಿಗಳ ಧಾರಾವಾಹಿಗಳನ್ನೇ ನೋಡುವುದರಿಂದ ನಮ್ಮನ್ನು ನೋಡಿದರೂ ಹೆದರುವುದೇ ಇಲ್ಲ!







ಅದರಲ್ಲಿ 'ಲಟ್ಟಣಿಗೆ ಎಸೆತ'ದ ತೀರ್ಪುಗಾರರಾಗಿ ಹೋಗಿದ್ರೂ, ಅಂಥ ಕಾಣ್ಸುತ್ತೇರಿ...!






ಏನು ಅಂದ್ರೇ... ಜಾಸ್ತಿ, ಹಸಿಯಾಗಿ ತಿನ್ನುವಂತಹ ತರಕಾರಿನೇ ತನ್ನಿ ತಿಳೀತಾ...?

## ನಕ್ಕುಬಿಡಿ

ವೈದ್ಯ: ಕಂಡ ಕಂಡ ಹೆಣ್ಣುಗಳ ಜೊತೆ ಸುತ್ತೋದು ನಿಲ್ಲಿಸದೆ ಹೋದರೆ ನಿನ್ನ ಪ್ರಾಣಕ್ಕೆ ಆಪತ್ತು ಗ್ಯಾರಂಟಿ ತಿಳಿದುಕೋ!
ಗುಂಡ: ಅಯ್ಯೋ ಡಾಕ್ಟ್ರೇ ನಾನು ಸಂಪೂರ್ಣವಾಗಿ ಆರೋಗ್ಯವಾಗಿದ್ದೇನೆ!
ವೈದ್ಯ: ವಿಷಯ ಅದಲ್ಲ! ನೀನು ಯಾವ ಹೆಣ್ಣುಗಳ ಹಿಂದೆ ಸುತ್ತುತ್ತಿದ್ದೀಯೋ ಅವರಲ್ಲಿ ನನ್ನ ಹೆಂಡತಿಯೂ ಇದ್ದಾಳೆ ಎಂಬುದನ್ನು ಮರೆಯಬೇಡ!

★★★

ಟೀಚರ್: ತಿಮ್ಮ ಎರಡು ವಿರುದ್ಧ ಪದಗಳನ್ನು ಹೇಳು.
ತಿಮ್ಮ: ಸುಖ–ದುಃಖ, ಶಾಂತಿ–ಅಶಾಂತಿ.
ಟೀಚರ್: ಗುಂಡ ನೀನೊಂದು ವಿರುದ್ಧ ಪದ ಹೇಳು.
ಗುಂಡ: ಪತಿ–ಪತ್ನಿ!

★★★

ಗುಂಡ: ಡಾಕ್ಟ್ರೇ ಡಾಕ್ಟ್ರೇ ರಾತ್ರಿ ನಿದ್ದೇನೇ ಬರೋಲ್ಲ! ವಿಪರೀತ ಸೊಳ್ಳೆ ಕಾಟ!
ವೈದ್ಯ: ತಗೊಳ್ಳಿ ಈ ಆಯಿಲ್ ಹಚ್ಚಿ.
ಗುಂಡ: ಡಾಕ್ಟ್ರೇ ಈ ಆಯಿಲ್ ನನಗೋ ಸೊಳ್ಳೆಗೋ?

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**

